## ರಾಜಿ ಅರ್ಜಿಯ ಮೇರೆಗೆ ಆದೇಶ

ವಾದಿ ಪ್ರತಿವಾದಿಯರ ವಿರುದ್ಧ ಭಾಗಾಂಶ ಹಾಗೂ ಪ್ರತ್ಯೇಕ ಸ್ವಾಧೀನ ಕೋರಿ ಈ ದಾವೆಯನ್ನು ಈ ಘನ ನ್ಯಾಯಾಲಯದಲ್ಲಿ ಹೂಡಿರುತ್ತಾರೆ. ತದ ನಂತರ ವಾದಿ ಮತ್ತು ಪ್ರತಿವಾದಿಯರು ತಮ್ಮ ಹಿತೈಷಿಗಳು, ಊರಿನ ಹಿರಿಯರು ಮತ್ತು ಪಂಚಾಯಿತಿ ಸದಸ್ಯರೆಲ್ಲರೂ ಸೇರಿ ಮಾತುಕತೆಯ ಮೂಲಕ ಈ ಪ್ರಕರಣವನ್ನು ಈ ಕೆಳಕಂಡಂತೆ ಇತ್ಯರ್ಥಪಡಿಸಿರುತ್ತಾರೆ. ಇದಕ್ಕೆ ವಾದಿ ಮತ್ತು ಪ್ರತಿವಾದಿಯರು ತಮ್ಮ ಮುಕ್ತ ಸಮ್ಮತಿಯಿಂದ ಒಪ್ಪಿರುತ್ತಾರೆ.

ಈ ದಾವೆಯ 1 ನೇ ಪ್ರತಿವಾದಿಯಾದ ಸರಸ್ವತಮ್ಮ ಕೋಂ ಲೇಟ್ ನಾಗೇಗೌಡ ರವರಿಗೆ ಸೇರತಕ್ಕ ಷೆಡ್ಯೂಲ್ ಸ್ವತ್ತುಗಳ ವಿವರಃ-

1) ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕು, ಅಕ್ಕಿಹೆಬ್ಬಾಳು ಹೋಬಳಿ, ಜೈನಹಳ್ಳಿ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂಬರ್ 20/1 ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 0.21 ಗುಂಟೆ ಪೈಕಿ 3 ಎಕರೆ ವಿಸ್ತೀರ್ಣವುಳ್ಳ ಜಮೀನಿಗೆ ಚೆಕ್ಕುಬಂದಿಃ-

ಪೂರ್ವಕ್ಕೆಃ- ಕಾಲುವೆ,
ಪಶ್ಚಿಮಕ್ಕೆಃ- ಮಾದೇಗೌಡ ರವರ ಜಮೀನು,
ಉತ್ತರಕ್ಕೆಃ- ದಂಡಮ್ಮನ ದೇವಸ್ಥಾನ,
ದಕ್ಷಿಣಕ್ಕೆಃ- ಜಯಮ್ಮ ರವರ ಜಮೀನು.

2) ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕು, ಅಕ್ಕಿಹೆಬ್ಬಾಳು ಹೋಬಳಿ, ಜೈನಹಳ್ಳಿ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂಬರ್ 20/1 ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 0.21 ಗುಂಟೆ ಪೈಕಿ 1 ಎಕರೆ ವಿಸ್ತೀರ್ಣವುಳ್ಳ ಜಮೀನಿಗೆ ಚೆಕ್ಕುಬಂದಿಃ-

ಪೂರ್ವಕ್ಕೆ:- ಸೋಮಶೇಖರ ರವರ ಜಮೀನು,
ಪಶ್ಚಿಮಕ್ಕೆ:- ಮೂಡ್ಲಿಗೌಡ ರವರ ಜಮೀನು,
ಉತ್ತರಕ್ಕೆ:- ತಿಮ್ಮೇಗೌಡ ರವರ ಜಮೀನು,
ದಕ್ಷಿಣಕ್ಕೆ:- ಗೋಮಾಳ.

3) ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕು, ಅಕ್ಕಿಹೆಬ್ಬಾಳು ಹೋಬಳಿ, ಜೈನಹಳ್ಳಿ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂಬರ್ 20/1 ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 0.21 ಗುಂಟೆ ಪೈಕಿ 0.21 ಗುಂಟೆ ವಿಸ್ತೀರ್ಣವುಳ್ಳ ಜಮೀನಿಗೆ ಚೆಕ್ಕುಬಂದಿ:-

ಪೂರ್ವಕ್ಕೆ:- ಸೋಮಶೇಖರ ರವರ ಜಮೀನು,
ಪಶ್ಚಿಮಕ್ಕೆ:- ಮೂಡ್ಲಿಗೌಡ ರವರ ಜಮೀನು,
ಉತ್ತರಕ್ಕೆ:- ಅಂಕೇಗೌಡ ರವರ ಜಮೀನು,
ದಕ್ಷಿಣಕ್ಕೆ:- ತಿಮ್ಮೇಗೌಡ ರವರ ಜಮೀನು.

ಈ ದಾವೆಯ ವಾದಿ ಮತ್ತು 2 ನೇ ಪ್ರತಿವಾದಿಯು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿರುವ ತಮ್ಮ ಹಕ್ಕು, ಮಾಲೀಕತ್ವ ಹಾಗೂ ಸ್ವಾಧೀನವನ್ನು ಈ ದಾವೆಯ 1 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ. ಅದರಂತೆ 1 ನೇ ಪ್ರತಿವಾದಿಯು ದಾವಾ ಷೆಡ್ಯೂಲ್ ಆಸ್ತಿಯನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಈ ದಾವೆಯ ವಾದಿ ಮತ್ತು 2 ನೇ ಪ್ರತಿವಾದಿಯು ಮುಕ್ತ ಸಮ್ಮತಿಯಿಂದ ಒಪ್ಪಿಕೊಂಡಿರುತ್ತಾರೆ.

ಇನ್ನು ಮುಂದೆ ಸದರಿ ಸ್ವತ್ತಿನ ಮೇಲೆ ಈ ದಾವೆಯ ವಾದಿಗೆ ಮತ್ತು 2 ನೇ ಪ್ರತಿವಾದಿಗೆ ಯಾವುದೇ ರೀತಿಯ ಹಕ್ಕು, ಮಾಲೀಕತೆ ಮತ್ತು ಸ್ವಾ ಧೀನಾನುಭವ ಇರುವುದಿಲ್ಲವೆಂದು ಒಪ್ಪಿ ಈ ದಾವೆಯ ವಾದಿ ಮತ್ತು ಪ್ರತಿವಾದಿಯರು ಈ ರಾಜಿ ಪತ್ರಕ್ಕೆ ತಮ್ಮ ಸಹಿ ಮಾಡಿರುತ್ತಾರೆ.

**:: <u>ಆದೇಶ</u> ::**

ವಾದಿಯರು ದಾಖಲು ಮಾಡಿರುವ ಈ ದಾವೆಯನ್ನು ರಾಜಿ ಅರ್ಜಿಯ ಮುಖೇನ ವಿಲೇವಾರಿ ಮಾಡಲಾಗಿದೆ. ರಾಜಿ ಅರ್ಜಿಯು ತೀರ್ಪಿನ ಒಂದು ಭಾಗವಾಗಿರುತ್ತದೆ. ಅದರಂತೆ ಡಿಕ್ರಿಯನ್ನು ಬರೆಯಿರಿ.

**(ಶ್ರೀಮತಿ.ಸುಷ್ಮಾ.ಸಿ.)**
1 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಕೆ.ಆರ್.ಪೇಟೆ.